**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 75/2024** ಪಿ.ಡಬ್ಲ್ಯುಃ 1

ಸಿ.ಡಬ್ಲ್ಯುಃ 3

| | |
|---|---|
| ಸಾಕ್ಷಿದಾರರ ಹೆಸರು | ಸುದರ್ಶನ |
| ತಂದೆಯ ಹೆಸರು | ಎಂ. ಶೇಖರ |
| ವಯಸ್ಸು | 60 ವರ್ಷ |
| ಉದ್ಯೋಗ | ಮೆಕ್ಯಾನಿಕ್ |
| ವಿಳಾಸ | ನಿಟ್ಟೂರು, ಉಡುಪಿ |

ದಿನಾಂಕಃ 12-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ -4 ಗೊತ್ತು. ದಿನಾಂಕ 06-09-2018 ರಂದು ತಾಲೂಕು ಆಫೀಸು ಕಚೇರಿ ಬಳಿಯ ಇಂದಿರಾ ಕ್ಯಾಂಟೀನ್ ಬಳಿ ಇದ್ದಾಗ ಸೆನ್ ಠಾಣೆಯ ಪೊಲೀಸರು ನಮ್ಮನ್ನು ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ ಮಧ್ಯಾಹ್ನದ 1 ಗಂಟೆಯ ಸಮಯ. ಆಗ ಚಾಸಾ -4 ಸಹ ಅಲ್ಲಿಯೇ ಇದ್ದರು. ಅಲ್ಲಿಗೆ ಚಾಸಾ -2 ಸಹ ಬಂದಿದ್ದರು. ಅಲ್ಲಿದ್ದ ಚಾಸಾ -1 ಗಾಂಜಾ ದಾಳಿಗೆ ಹೋಗಬೇಕಾಗಿದೆ ಎಂದು ತಿಳಿಸಿ, ನೋಟಿಸು ಕೊಟ್ಟಿದ್ದರು, ಅದಕ್ಕೆ ನಾನು ಒಪ್ಪಿದ್ದೆ. ಸದರಿ ನೋಟಿಸನ್ನು ಈಗ ನೋಡಿ **ನಿಪಿ-1,** ಅದರಲ್ಲಿರುವ ನನ್ನ ಸಹಿ ನಿಪಿ-1(ಎ) ಎಂದು ಗುರುತಿಸಿದ್ದೇನೆ.

2) ನಂತರ ನಾನು, ಚಾಸಾ -1, 2, 4 , ಪೊಲೀಸ್ ಸಿಬ್ಬಂದಿಗಳು, ಪ್ಯಾಕ್ ಮಾಡುವ ಸಾಮಾನುಗಳು, ತೂಕ ಮಾಡುವ ಮೆಶಿನ್, ಅರಗು ಸೀಲು, ಲ್ಯಾಪ್ ಟಾಪ್, ಇವುಗಳೊಂದಿಗೆ ಇಲಾಖಾ ವಾಹನದಲ್ಲಿ ಮಣಿಪಾಲದ ವಿದ್ಯಾರತ್ನ ಅಧಿತಿ ಅಪಾರ್ಟಮೆಂಟ್ ಗೆ ಹೋಗಿದ್ದೆವು. ಅಲ್ಲಿ ಪಾರ್ಕಿಂಗ್ ಜಾಗದಲ್ಲಿ ವಾಹನ ನಿಲ್ಲಿಸಿದ್ದೆವು. ಅಲ್ಲಿಂದ 2 ನೇ ಮಹಡಿಯಲ್ಲಿದ್ದ ಪ್ಲ್ಯಾಟ್ ನಂಬ್ರ 204 ಕ್ಕೆ ಹೋಗಿದ್ದೆವು. ಅಲ್ಲಿ ಚಾಸಾ -1

ಬಾಗಿಲು ಬಡಿದಿದ್ದರು ಮತ್ತು ತಾವು ಬಂದಿರುವುದು ಕಸ್ಟಮರ್ಸ ಎಂದು ಹೇಳಿದ್ದರು. ಆಗ ಬಾಗಿಲು ತೆಗೆದಿದ್ದ ವ್ಯಕ್ತಿ 1 ನೇ ಆರೋಪಿ ಆಗಿದ್ದ.

2) ನಾವು ಒಳಗೆ ಹೋದಾಗ ಸ್ವಲ್ಪ ದೊಡ್ಡದಾದ ಕೋಣೆಯಲ್ಲಿ ಕಾಟ್ ಗಳ ಮೇಲೆ ಬೆಡ್ ಹಾಕಲಾಗಿತ್ತು. ಅದರ ಮೇಲೆ ಆರು ಜನ ಕುಳಿತ್ತಿದ್ದರು. ಆಗ 1 ನೇ ಆರೋಪಿಗೆ ಚಾಸಾ -1, ಗಾಂಜಾದ ಸೇವನೆ ಮತ್ತು ಶೇಖರಣೆ ಬಗ್ಗೆ ವಿಚಾರಿಸಿದ್ದರು. ಆ ಕೋಣೆಯಲ್ಲಿದ್ದ ಕಪಾಟನ್ನು ತೋರಿಸಿದ್ದ. ಆ ಕಪಾಟಿನ ಕೆಳಭಾಗದಲ್ಲಿ ಎರಡು ಶೋಲ್ಡರ್ ಬ್ಯಾಗ್ ಗಳು ಇದ್ದವು. ಅವುಗಳನ್ನು ಹೊರಗೆ ತೆಗೆದು ತೋರಿಸಲು ಚಾಸಾ -1 ಹೇಳಿದ್ದರು. ಸದರಿ ಶೋಲ್ಡರ್ ಬ್ಯಾಗ್ ನಲ್ಲಿ ಇದ್ದ ಒಂದು ಪ್ಲಾಸ್ಟಿಕ್ ಕಪ್ಪ ತೊಟ್ಟೆ ಇದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಎಲೆ , ಬೀಜ, ದಂಟು, ಮೊಗ್ಗು, ಇತ್ತು. ಅದು ಗಾಂಜಾ ಅಗಿತ್ತು. ಅಲ್ಲಿಯೇ ಇದ್ದ ಇನ್ನೊಂದು ಶೋಲ್ಡರ್ ಬ್ಯಾಗ್ ನಲ್ಲಿ ತೂಕ ಮಾಡುವ ಮಿಶಿನ್ ಇತ್ತು.

3) ಆ ಗಾಂಜಾವನ್ನು ಜಪ್ತು ಮಾಡಿ, ಉಳಿದ ಅರೋಪಿತರನ್ನು ದಸ್ತಗಿರಿ ಮಾಡಿದ್ದರು. ಚಾಸಾ -1, 1 ನೇ ಅರೋಪಿಯನ್ನು ವಿಚಾರಿಸಿದಾಗ ಅದೇ ದಿನ ಅಶ್ವಿನ್ ಎನ್ನುವವರು 3 ಕೆಜಿ ಗಾಂಜಾವನ್ನು ಕೊಟ್ಟಿದ್ದನು ಎಂದು ತಿಳಿಸಿದ್ದರು. ಆದಿನ ಅಲ್ಲಿ ಇದ್ದ 7 ನೇ ಅರೋಪಿತನನ್ನು ಪೊಲೀಸರು ಅಂಗ ಜಪ್ತಿ ಮಾಡಿದ್ದರು. ಆತನ ಜೇಬಿನಲ್ಲಿ ಒಂದು ಮೊಬೈಲ್ ಸಿಕ್ಕಿತ್ತು. ಆದಿನ 1 ನೇ ಆರೋಪಿಯ ಬಳಿಯಲ್ಲಿ 2 ಸಾವಿರ ರೂಪಾಯಿಯ ಎರಡು ನೋಟುಗಳು, 500 ರೂಪಾಯಿ 4 ನೋಟುಗಳು, ಒಂದು ಮೊಬೈಲ್ ಸಿಕ್ಕಿತ್ತು. ಉಳಿದ 5 ಜನರ ಅಂಗ ಜಪ್ತಿಯನ್ನು ಸಹ ಮಾಡಿದ್ದರು. ಅವರ ಬಳಿ ಏನು ಸಿಕ್ಕಿರಲಿಲ್ಲ.

4) ಆದಿನ 1 ನೇ ಅರೋಪಿ ಹಾಜರುಪಡಿಸಿದ ಶೋಲ್ಡರ್ ಬ್ಯಾಗ್ ನಲ್ಲಿ ಎರಡು ಪ್ಯಾಕೇಟ್ ಗಳು ಇದ್ದವು. ಅವುಗಳನ್ನು ತೂಕ ಮಾಡಿದಾಗ ಒಂದು ಪ್ಯಾಕೇಟ್ ನಲ್ಲಿ 1 ಕೆಜಿ 254 ಗ್ರಾಂ, ಇನ್ನೊಂದು ಪ್ಯಾಕ್ ನಲ್ಲಿ 1 ಕೆಜಿ 555 ಗ್ರಾಂನಷ್ಟು ಗಾಂಜಾ ಇತ್ತು. ಅವೆರಡು ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ, ಹೊಲಿದು, ಡಿಸಿಬಿ ಎನ್ನುವ ಸೀಲು ಹಾಕಿದ್ದರು. ಆದಿನ 1 ಮತ್ತು 7 ನೇ ಅರೋಪಿತರ ಬಳಿ ಸಿಕ್ಕ ಮೊಬೈಲ್ ಗಳನ್ನು ಸಹ ಪ್ಯಾಕ್ ಮಾಡಿ ಜಪ್ತು ಮಾಡಿದ್ದರು. ಆದಿನ ಅಲ್ಲಿ 1-45 ರಿಂದ 3-45 ರ

ಸಮಯದವರೆಗೆ ಪಂಚನಾಮೆಯನ್ನು ಬರೆದಿದ್ದರು. ಆದಿನ ಬರೆದ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2**, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿದ್ದೇನೆ.

5) ಆ ಸಮಯದಲ್ಲಿ ಜಪ್ತು ಮಾಡಿದ್ದ ವಸ್ತುಗಳ ಮೇಲೆ ತನಿಖಾದಿಕಾರಿ ಬಳಸಿದ್ದ ಸೀಲಿನ ಮಾದರಿಯನ್ನು ನನಗೆ ಕೊಟ್ಟಿದ್ದರು. ಅದಕ್ಕಾಗಿ ಸ್ವೀಕೃತಿಯನ್ನು ಸಹ ಬರೆದು ಕೊಟ್ಟಿದ್ದೆ. ಆ ದಾಖಲೆಯನ್ನು ಈಗ ನೋಡಿ **ನಿಶಾನೆ ಪಿ-3** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ಪೋಟೋಗಳನ್ನು ಸಹ ತೆಗೆದಿದ್ದರು. ಆಗ ತೆಗೆದಿದ್ದ 6 ಪೋಟೋಗಳಲ್ಲಿ ನಾನು, ಚಾಸಾ-1, 2, 4, ಪೊಲೀಸರು ಹಾಗೂ 1 ರಿಂದ 7 ನೇ ಅರೋಪಿತರು ಇದ್ದೇವೆ. ಸದರಿ 6 ಪೋಟೋಗಳನ್ನು **ನಿಶಾನೆ ಪಿ-4** ಎಂದು ಒಟ್ಟಾಗಿ ಗುರುತಿಸಿದ್ದೇನೆ. ನನಗೆ ಈಗ ತೋರಿಸಿದ ಪೋಟೋಗಳನ್ನು ತೂಕ ಮಾಡುವಾಗ ತೆಗೆದಿತ್ತು. ಅವುಗಳನ್ನು **ನಿಶಾನೆ ಪಿ-5** ಎಂದು ಗುರುತಿಸಿದ್ದೇನೆ. ನಿಪಿ-5 ರ ಪೋಟೋಗಳಲ್ಲಿ ಗಾಂಜಾ ಸಹ ಇದೆ.

6) ಆದಿನ ಜಪ್ತಾದ ಶೋಲ್ಡರ್ ಬ್ಯಾಗ್, ಮೊಬೈಲ್, ನಗದು ಹಣ, ತೂಕದ ಮಾಪನಗಳನ್ನು ನೋಡಿ ಗುರುತಿಸಬಲ್ಲೆ. ಈದಿನ ಸೀಲ್ ಮಾಡಿದ್ದ ಪ್ಯಾಕ್ ನಿಂದ ತೆಗೆದ ತೂಕದ ಮಾಪನವನ್ನು ನೋಡಿ, ಅದನ್ನು **ಎಂಒ-1** ಎಂದು ಗುರುತಿಸಿದ್ದೇನೆ. ಮೊಬೈಲ್ ಗಳನ್ನು ನೋಡಿದರೆ ಗುರುತಿಸಬಲ್ಲೆ. ಜಪ್ತಾದ ಹಣವನ್ನು ನೋಡಿದರೆ ಗುರುತಿಸಬಲ್ಲೆ. ಜಪ್ತಾದ ಹಣದ ಗುರುತಿನ ಬಗ್ಗೆ ತಕರಾರು ಇರುವುದಾಗಿ ಸಲ್ಲಿಸಿದ್ದಾರೆ. ಆದಿನ ಜಪ್ತಾದ ಮೊಬೈಲ್‌ಗಳ 4 ಪೋಟೋಗಳನ್ನು ನೋಡಿ **ನಿಶಾನೆ ಪಿ-6** ಎಂದು ಗುರುತಿಸಿದ್ದೇನೆ. ಆದಿನ 1 ನೇ ಆರೋಪಿತನಿಂದ ಜಪ್ತಾದ ಹಣವನ್ನು ಈಗ ನೋಡಿ ಗುರುತಿಸಿದ್ದೇನೆ. ಅದನ್ನು **ಎಂಒ-2** ಎಂದು ಗುರುತಿಸಿದ್ದೇನೆ. ನಿಪಿ-5 ರ ಪೋಟೋಗಳಲ್ಲಿರುವ ಗಾಂಜಾವನ್ನು ಆದಿನ ಜಪ್ತು ಮಾಡಲಾಗಿತ್ತು. ಪಂಚನಾಮೆಯ ನಂತರ ಎಲ್ಲರೂ ಠಾಣೆಗೆ ಹೋಗಿದ್ದೆವು, ಅಲ್ಲಿಂದ ಮನೆಗೆ ಹೋಗಿದ್ದೆ. ಆದಿನ ನಡೆದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಿಸಿದ್ದರು.

7) ಆದಿನ ಪೊಲೀಸರು ದಸ್ತಗಿರಿ ಮಾಡಿದ್ದ 7 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

ಪಾಟಿಸವಾಲುಃ ಆರೋಪಿ ತಲೆತಪ್ಪಿಸಿಕೊಂಡಿದ್ದರಿಂದ ಇಲ್ಲ ಎಂದು ತೆಗೆದುಕೊಂಡಿತು.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.